# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** (ಎ) ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕಿನ 146 ಗ್ರಾಮೀಣ ಜನವಸತಿಗಳು, ಕಡೂರು ತಾಲ್ಲೂಕಿನ 434 ಗ್ರಾಮೀಣ ಜನವಸತಿಗಳು ಹಾಗೂ ತರೀಕೆರೆ ತಾಲ್ಲೂಕಿನ 156 ಜನವಸತಿಗಳು ಮತ್ತು ತರೀಕೆರೆ ಪಟ್ಟಣ ಮತ್ತು
(ಬಿ) ತರೀಕೆರೆ ತಾಲ್ಲೂಕಿನ ಉಳಿದ ಗ್ರಾಮೀಣ ಜನವಸತಿಗಳು ಮತ್ತು ಅಜ್ಜಂಪುರ ಪಟ್ಟಣ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ಹಾಗೂ (ಎ) ಮತ್ತು (ಬಿ) ರ ಯೋಜನೆಗಳ ಪರಿಣಾಮವಾಗಿ
(ಸಿ) ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಹೊಸದುರ್ಗ ಪಟ್ಟಣ ಮತ್ತುಇತರೆ 346 ಗ್ರಾಮಗಳಿಗೆ ನೀರು ಸರಬರಾಜು ಮಾಡುವ ಪ್ರಗತಿಯಲ್ಲಿರುವ ಯೋಜನೆಗೆ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂ:ಗ್ರಾಅಪ/01/ಗ್ರಾನೀಸ(5)2020 ದಿನಾಂಕ:16.03.2020
2. ದಿನಾಂಕ:10.03.2021ರ ರಾಜ್ಯ ಮಟ್ಟದ ಯೋಜನಾ ಮಂಜೂರಾತಿ ಸಮಿತಿ ನಡವಳಿಗಳು.
3. ದಿನಾಂಕ:30.04.2021, 20.01.2022 ರಂದು ನಡೆದ ರಾಜ್ಯ ತಾಂತ್ರಿಕ ಸಲಹಾ ಸಮಿತಿ ಸಭೆಯ (STA) ನಡವಳಿಗಳು.
4. ದಿನಾಂಕ:20.12.2021 ಮತ್ತು 25.01.2022 ರಂದು ನಡೆದ Variation & EoT ಸಭೆಯನಡವಳಿಗಳು
5. ಮುಖ್ಯಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ರವರ ಇ-ಆಫೀಸ್ ಕಡತ ಸಂ: RDWSD-TECHNOCN/37/2021.

* * * * *

**ಪೀಠಿಕೆ:**

(ಎ) ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕಿನ 146 ಗ್ರಾಮೀಣ ಜನವಸತಿಗಳು, ಕಡೂರು ತಾಲ್ಲೂಕಿನ 434 ಗ್ರಾಮೀಣ ಜನವಸತಿಗಳು ಹಾಗೂ ತರೀಕೆರೆ ತಾಲ್ಲೂಕಿನ 156 ಜನವಸತಿಗಳು ಮತ್ತು ತರೀಕೆರೆ ಪಟ್ಟಣ ಮತ್ತು (ಬಿ) ತರೀಕೆರೆ ತಾಲ್ಲೂಕಿನ ಉಳಿದ ಗ್ರಾಮೀಣ ಜನವಸತಿಗಳು ಮತ್ತು ಅಜ್ಜಂಪುರ ಪಟ್ಟಣ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು DBOT ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ಹಾಗೂ (ಎ) ಮತ್ತು (ಬಿ) ರ ಯೋಜನೆಗಳ ಪರಿಣಾಮವಾಗಿ (ಸಿ) ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಹೊಸದುರ್ಗ ಪಟ್ಟಣ ಮತ್ತು ಇತರೆ 346 ಗ್ರಾಮಗಳಿಗೆ ನೀರು ಸರಬರಾಜು ಮಾಡುವ ಪ್ರಗತಿಯಲ್ಲಿರುವ ಯೋಜನೆಗೆ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ಕೋರರುವ ಪ್ರಸ್ತಾವನೆಗಳಂತೆ ಒಟ್ಟಾರೆಯಾಗಿ ಶಾಶ್ವತ ಹಾಗೂ ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ರೂ.1829.93 ಕೋಟಿಗಳ ಅಂದಾಜಿನ ಆಧಾರಿತ ಬಹುಗ್ರಾಮ ಕುಡಿಯುವ

ನೀರು ಸರಬರಾಜು ಯೋಜನೆಯ PSR ಗೆ ದಿನಾಂಕ:10.03.2021 ರ ರಾಜ್ಯಮಟ್ಟದ ಯೋಜನಾ ಮಂಜೂರಾತಿ ಸಮಿತಿಯಲ್ಲಿಅನುಮೋದನೆ ಪಡೆಯಲಾಗಿದೆ.

ಪ್ರಸ್ತಾಪಿತ ಯೋಜನೆಯನ್ನು ದಿನಾಂಕ:30.04.2021 ರಂದು ನಡೆದ ರಾಜ್ಯ ತಾಂತ್ರಿಕ ಸಂಸ್ಥೆ (STA) ಸಮಿತಿ ಸಭೆಯಲ್ಲಿ ಮಂಡಿಸಲಾಗಿರುವುದನ್ನು ಸಮಿತಿಯು ವಿವರವಾಗಿ ಪರಿಶೀಲಿಸಿ ಈ ಯೋಜನೆಗಳಿಗೆ ಒಂದೇ ಜಲಮೂಲವಿರುವುದನ್ನು ಮತ್ತು ಸೊಕ್ಕೆ ಗ್ರಾಮದವರೆಗೆ ಒಂದೇ ಪೈಪ್‌ಲೈನ್ ಅಳವಡಿಸಬೇಕಾಗಿರುವುದನ್ನು ಹಾಗೂ ನಂತರ ಪೈಪ್‌ಲೈನ್ ಅನ್ನು ವಿಭಜಿಸ ಬೇಕಾಗುವ ಬಗ್ಗೆ ರಾಜ್ಯ ತಾಂತ್ರಿಕ ಸಲಹಾ ಸಮಿತಿಯು ಪರಾಮರ್ಶಿಸಿತು. ಅಲ್ಲದೆ, ಇದೇ ಮಾರ್ಗದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯಿಂದ ಕಡೂರು ಮತ್ತು ತರೀಕೆರೆ ನಗರಕ್ಕೆ ನೀರು ಸರಬರಾಜು ಯೋಜನೆಗಾಗಿ ಅಳವಡಿಸಿರುವ ಪೈಪ್‌ಲೈನ್ ಹಾಗೂ ಹೊಸದುರ್ಗ ಯೋಜನೆಯ ಉದ್ದೇಶಿತ ಪೈಪ್‌ಲೈನ್ ಅಳವಡಿಸ ಬೇಕಾಗಿರುವುದನ್ನು ಸಮಿತಿಯು ಗಮನಿಸಿ, ಇದರಿಂದ ಒಂದೇ ಮಾರ್ಗದಲ್ಲಿ ಪೈಪ್‌ಲೈನ್‌ಗಳನ್ನು ಅಳವಡಿಸ ಬೇಕಾಗಿರುವುದರಿಂದ ಭೂಲಭ್ಯತೆ ಸಮಸ್ಯೆ ಎದುರಾಗುವ ಕುರಿತು ಸಮಿತಿಯು ಗಮನಿಸಿತು. ಆದ್ದರಿಂದ, ಒಂದೇ ಮಾರ್ಗದಲ್ಲಿ ಬಹು ನೀರಿನಪೈಪ್‌ಲೈನ್‌ಗಳನ್ನು ಭೂಮಿಯ ಲಭ್ಯತೆಯಲ್ಲಿನ ನಿರ್ಬಂಧದಿಂದಾಗಿ ಅಳವಡಿಸುವುದು ಕಷ್ಟಕರವಾಗಿರುತ್ತದೆ ಎಂದುಗ ಮನಿಸಿ, ಎರಡು ಯೋಜನೆಗೆ ಅವಶ್ಯವಿರುವ ಕಚ್ಚಾ ನೀರಿನ ಒಟ್ಟು 107.40 MLD ಗಾಗಿ ಭದ್ರಾಜಲಾಶಯದಲ್ಲಿ ಒಂದೇ ಹೆಡ್‌ವರ್ಕ್ ಮತ್ತು ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಿ ಒಂದೇ ಪೈಪ್ ಲೈನ್ ಮುಖಾಂತರ ಸೊಕ್ಕೆ ಗ್ರಾಮದವರೆಗೆ ನೀರನ್ನು ಸರಬರಾಜು ಮಾಡಲು ಸಮಿತಿಯು ಅಭಿಪ್ರಾಯಿಸಿತು (ಹೊಸದುರ್ಗ ಯೋಜನೆಯ 44.86 MLD + ಚಿಕ್ಕಮಗಳೂರು ಯೋಜನೆಯ 62.54 MLD =107.40 MLD).

ರಾಜ್ಯ ತಾಂತ್ರಿಕ ಸಲಹಾ ಸಮಿತಿಯ ಅಭಿಪ್ರಾಯದಂತೆ, ಎರಡು ಯೋಜನೆಗಳಿಗೆ ಸಂಬಂಧಿಸಿದಂತೆ, Headworks & WTP ಗಳನ್ನು ಸಂಯೋಜಿಸಿ "ಸೊಕ್ಕೆ" ಗ್ರಾಮದವರೆಗೂ Common rising main ಮತ್ತು Break pressure tank ನ್ನು ನಿರ್ಮಿಸಿತದ ನಂತರ ಎರಡು ವಿಭಿನ್ನ ದಿಕ್ಕುಗಳಲ್ಲಿ ಪ್ರತ್ಯೇಕವಾದ ಪೈಪ್‌ಲೈನ್‌ಗಳ ಮೂಲಕ ನೀರನ್ನು ಪೂರೈಸಲು ಉದ್ದೇಶಿಸಿ, ದಿನಾಂಕ:20.12.2021 ರಂದು ನಡೆದ Variation & EoT ಸಭೆಯಲ್ಲಿ ಸೊಕ್ಕೆ ಗ್ರಾಮದ ವರೆಗೂ, common Headworks, WTP & Pipelines ಗಳಿಗೆ ಅಂದಾಜು ಮೊತ್ತವನ್ನು ತಯಾರಿಸಿ ಅನುಮೋದನೆಗಾಗಿ ಮಂಡಿಸಲಾಗಿದ್ದು, ವಿವರವಾದ ಚರ್ಚೆಯ ನಂತರ ಎರಡು ಯೋಜನೆಗಳಿಗೆ Common Head works ಮತ್ತು ಚಿಕ್ಕಮಗಳೂರು ಯೋಜನೆಗೆ ಹಾಗೂ ಹೊಸದುರ್ಗ ಮತ್ತು ತರೀಕೆರೆ ಸಂಯೋಜಿತ ಯೋಜನೆಗೆ ಪ್ರತ್ಯೇಕವಾದ WTP ಗಳನ್ನು ರೂಪಿಸುವಂತೆ ಸಮಿತಿಯು ಸೂಚಿಸಿತು.

ಅದರಂತೆ, ಯೋಜನೆಗಳನ್ನು ಪರಿಷ್ಕರಿಸಿ, ದಿನಾಂಕ: 20.01.2022 ರಂದು ನಡೆದ ರಾಜ್ಯ ತಾಂತ್ರಿಕ ಸಲಹಾ ಸಮಿತಿಯ (STA) ಮುಂದೆ ಮಂಡಿಸಲಾಯಿತು. ಸದರಿ ಮೂರು ಯೋಜನೆಗಳಿಗೆ ಒಂದೇ ಜಲಮೂಲವನ್ನು ಪರಿಗಣಿಸಿರುವುದನ್ನು ಸಮಿತಿಯ ಮುಂದೆ ವಿವರಿಸಲಾಯಿತು.

- ನೀರು ಶುದ್ಧೀಕರಣ ಘಟಕದವರೆಗೆ ಒಂದೇ ಕಚ್ಚಾ ನೀರಿನ ಪೈಪ್‌ಲೈನ್‌ನ್ನು ಮೂರು ಯೋಜನೆಗಳಿಗೂ ಅಳವಡಿಸಿ ಪ್ರಸ್ತಾಪಿಸಿರುವುದು,

- ಹೊಸದುರ್ಗ ಯೋಜನೆಯೊಂದಿಗೆ ತರೀಕೆರೆ ತಾಲ್ಲೂಕಿನ ಒಂದು ಭಾಗದ ನೀರಿನ ಪೂರೈಕೆಗೆ ಒಂದೇ ಪೈಪ್‌ಲೈನ್ ಅಳವಡಿಸಿ ಪ್ರಸ್ತಾಪಿಸಿರುವುದನ್ನು ಮತ್ತು
- ಚಿಕ್ಕಮಗಳೂರು ಯೋಜನೆಗೆ ಪ್ರತ್ಯೇಕ ನೀರುಶುದ್ದೀಕರಣ ಘಟಕ ಮತ್ತು ಪ್ರತ್ಯೇಕ ಪೈಪ್ಲೈನ್ ಅಳವಡಿಸಿ ಪ್ರಸ್ತಾಪಿಸಿರುವುದು.

ಸಮಿತಿಯು ವಿವರವಾದ ಪರಿಶೀಲನೆಯ ನಂತರ ಪ್ರಸ್ತಾವನೆಗೆ ತಾಂತ್ರಿಕ ಒಪ್ಪಿಗೆ ನೀಡಿರುತ್ತದೆ. ಅದರಂತೆ, ದಿನಾಂಕ:25.01.2022 ರಂದು ನಡೆದ Variation & EoT ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆದಿರುವಂತೆ, ಮೂರು ಯೋಜನೆಗೆ ಒಂದೇ Common Head works ಹಾಗೂ ತರೀಕೆರೆ, ಹೊಸದುರ್ಗ ಯೋಜನೆಗೆ ಒಂದೇ ನೀರುಶುದ್ದೀಕರಣ ಘಟಕ ಮತ್ತು ಚಿಕ್ಕಮಗಳೂರು ಯೋಜನೆಗೆ ಪ್ರತ್ಯೇಕವಾದ ನೀರುಶುದ್ದೀಕರಣ ಘಟಕ ಹಾಗೂ ಪೈಪ್ ಲೈನ್ ಹಾಗೂ ತರೀಕೆರೆ ಯೋಜನೆಗೆ ಪ್ರತ್ಯೇಕವಾದ ಪೈಪ್‌ಲೈನ್ ಅಳವಡಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಿರುತ್ತದೆ.

ಸದರಿ ಪ್ರಸ್ತಾವನೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಕಡೂರು ಮತ್ತು ತರೀಕೆರೆ ತಾಲ್ಲೂಕಿನ ಭಾಗಶಃ ಹಾಗೂ ಉಳಿದ ತರೀಕೆರೆ ತಾಲ್ಲೂಕಿನ ಜನವಸತಿಗಳಿಗೆ ಸಗಟು ನೀರು ಪೂರೈಸಲು ಜೆ.ಜೆ.ಎಂ ಯೋಜನೆಯಡಿ ಕಾರ್ಯಾತ್ಮಕ ನಳ ನೀರು ಸಂಪರ್ಕವನ್ನು ಪ್ರತಿಮನೆಗಳಿಗೆ ಸಂಪರ್ಕ ಕಲ್ಪಿಸಲು ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯಡಿ ಕೈಗೊಂಡು, ಭದ್ರಾಜಲಾಶಯದನೀರನ್ನುಜಲಮೂಲವನ್ನಾಗಿಪರಿಗಣಿಸಿದ್ದು, 55 LPCD ಯಂತೆ ಶುದ್ಧಕುಡಿಯುವ ನೀರನ್ನು ಪೂರೈಸಲು ಅನುವಾಗುವಂತೆ ಈ ಯೋಜನೆಯನ್ನು ತಯಾರಿಸಲಾಗಿದೆ. ಕೇಂದ್ರ ಪುರಸ್ಕೃತ ಜಲ ಜೀವನ್ ಮಿಷನ್ ಕಾರ್ಯಕ್ರಮದಡಿ ಸಂಯೋಜಿತಗೊಳಿಸಿದ NABARD-RIDF XXVII ರಡಿ ಅನುಷ್ಠಾನಗೊಳಿಸಲು ಕೇಂದ್ರ ಮತ್ತು ರಾಜ್ಯ ವಲಯಗಳಡಿ ವೆಚ್ಚವನ್ನು ಭರಿಸಲು ನಿರ್ಣಯಿಸಲಾಗಿದೆ.

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ಪಟ್ಟಣ ಮತ್ತುಇತರೆ 346 ಜನವಸತಿಗಳಿಗೆ ಶುದ್ಧಕುಡಿಯುವ ನೀರು ಹಾಗೂ ತರೀಕೆರೆ ತಾಲ್ಲೂಕಿನ ಮಾರ್ಗ ಮಧ್ಯದ 113 ಗ್ರಾಮಗಳಿಗೆ ಕಚ್ಚಾ ನೀರು ಒದಗಿಸುವ DBOT ಆಧಾರಿತ ಯೋಜನೆಯ ಹಂತ-1 (ಭಾಗ-ಎ ಮತ್ತು ಭಾಗ-ಬಿ)ಯ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ಮೇಲೆ ಓದಲಾದ(1)ರ ಆದೇಶದಲ್ಲಿ ಈಗಾಗಲೇ ರೂ.48000.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ,

ಹೊಸದುರ್ಗ ನೀರು ಸರಬರಾಜು ಯೋಜನೆಯ ಹಂತ-1, ಭಾಗ ಎ ಮತ್ತು ಭಾಗ-ಬಿ ಕಾಮಗಾರಿಗಳನ್ನು ಈಗಾಗಲೇ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಅನುಷ್ಠಾನದ ಹಂತದಲ್ಲಿದ್ದು, ವ್ಯವಸ್ಥಿತ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಯೋಜನೆಯನ್ನು ಕಾರ್ಯಗತಗೊಳಿಸುವಾಗ ಗುತ್ತಿಗೆದಾರರಿಗೆ ಶೇ.9.01 ರಷ್ಟು ಹೆಚ್ಚು ಟೆಂಡರ್ ಪ್ರೀಮಿಯಂರಂತೆ ಸಂಯೋಜಿತ ಹೆಡ್‌ವರ್ಕ್ಸ್ ಮತ್ತು ಕಚ್ಚಾನೀರಿನ ಪ್ರಮಾಣಗಳಿಂದ ಹಂತ-1, ಭಾಗ ಎ ಯೋಜನೆಯ ವ್ಯಾಪ್ತಿಯ ಮೊತ್ತದಲ್ಲಿ ಪರಿಷ್ಕೃತಗೊಂಡಿರುತ್ತದೆ ಮತ್ತು ಯೋಜನೆಯ ಹಂತ 1 ಭಾಗ-ಬಿ ಹಾಗೂ ಹಂತ-2ರ ಮೊತ್ತದಲ್ಲಿ

ಬದಲಾವಣೆಯಿರುವುದಿಲ್ಲ. ಹೊಸದುರ್ಗ ಯೋಜನೆಯ ಪರಿಷ್ಕೃತ ಅಂದಾಜುಮೊತ್ತ ರೂ.723.93 ಕೋಟಿಗಳಾಗಿರುತ್ತದೆ.

ಮೇಲೆ ಓದಲಾದ (4)ರಲ್ಲಿ Variation & EoT ಸಭೆಯಲ್ಲಿ ಸದರಿ ಮೂರು ಯೋಜನೆಗಳಿಗೆ ಒಂದೇ ಜಲಮೂಲವನ್ನು ಪರಿಗಣಿಸಿರುವುದು, ನೀರು ಶುದ್ಧೀಕರಣ ಘಟಕದ ವರೆಗೆ ಒಂದೇ ಕಚ್ಚಾ ನೀರಿನ ಪೈಪ್‌ಲೈನ್‌ನ್ನು ಮೂರು ಯೋಜನೆಗಳಿಗೆ ಅಳವಡಿಸುವುದು, ಒಂದೇ Common Head works, WTP, ಪೈಪ್‌ಲೈನ್‌ಗಳನ್ನು ಅಳವಡಿಸಲು ಯೋಜಿಸಲಾಗಿದೆ.

ಪ್ರಸ್ತುತ ಯೋಜನೆಗೆ ಭದ್ರಾನದಿಗೆ ಅಡ್ಡಲಾಗಿರುವ ಭದ್ರಾಅಣೆಕಟ್ಟಿನ ಹಿನ್ನೀರಿನಲ್ಲಿ ಈ ಯೋಜನೆಯ ಇಂಟೇಕ್‌ವೆಲ್‌ನಿಂದ, ಒಂದೇ ಹೆಡ್‌ವರ್ಕ್ಸ್ ನಿಂದ ಒಟ್ಟು 108.00 MLD ಕಚ್ಚಾ ನೀರನ್ನು ಸೆಳೆಯಲು ಯೋಜಿಸಲಾಗಿದ್ದು, ಜಲಸಂಪನ್ಮೂಲ ಇಲಾಖೆಯಿಂದ ಅನುಮತಿ ಪಡೆಯಲಾಗಿದೆ.

ಯೋಜನೆಯ ಅನುಷ್ಠಾನಕ್ಕೆ ಒಟ್ಟಾರೆ ಅಂದಾಜು ವೆಚ್ಚದ ಅನುದಾನದ ವಿಂಗಡಣೆ ವಿವರ ಈ ಕೆಳಕಂಡಂತಿದೆ.

(ಎ) ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕಿನ 146 ಗ್ರಾಮೀಣ ಜನವಸತಿಗಳು, ಕಡೂರು ತಾಲ್ಲೂಕಿನ 434 ಗ್ರಾಮೀಣ ಜನವಸತಿಗಳು ಹಾಗೂ ತರೀಕೆರೆ ತಾಲ್ಲೂಕಿನ ಭಾಗಶಃ 156 ಜನವಸತಿಗಳು ಮತ್ತು ತರೀಕೆರೆ ಪಟ್ಟಣದ ಒಟ್ಟು ಅಂದಾಜು ರೂ.952.00ಕೋಟಿಗಳು.

(ಬಿ)ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಉಳಿದ ಗ್ರಾಮೀಣ ಜನವಸತಿಗಳು ಮತ್ತು ಅಜ್ಜಂಪುರ ಪಟ್ಟಣವನ್ನು ಒಳಗೊಂಡಂತೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಅಂದಾಜು ಮೊತ್ತರೂ.154.00 ಕೋಟಿಗಳು ಹಾಗೂ (ಎ) ಮತ್ತು (ಬಿ) ಯೋಜನೆಗಳ ಪರಿಣಾಮವಾಗಿ;

(ಸಿ) ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಹೊಸದುರ್ಗ ಪಟ್ಟಣ ಮತ್ತುಇತರೆ 346 ಗ್ರಾಮಗಳಿಗೆ ನೀರು ಸರಬರಾಜು ಯೋಜನೆಯ ಪರಿಷ್ಕೃತ ಅಂದಾಜು ಮೊತ್ತರೂ.723.93ಕೋಟಿಗಳು.

ಮುಖ್ಯಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆರವರು ಮೇಲೆ ಓದಲಾದ (5)ರ ಕಡತದಲ್ಲಿ (ಎ), (ಬಿ) ಮತ್ತು (ಸಿ) ಮೂರು ಯೋಜನೆಗಳ ಒಟ್ಟಾರೆ ಅಂದಾಜು ಮೊತ್ತ ರೂ.1829.93 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿರುತ್ತಾರೆ.

ಪ್ರಸ್ತುತ ಯೋಜನೆಗಳನ್ನು ಚಾಲನೆಗೊಳಿಸ ಬೇಕಾಗಿದ್ದು, ಅದಕ್ಕಾಗಿ ಚಾಲ್ತಿ ಪಾರದರ್ಶಕ ನೀತಿಯನ್ವಯ ನಿಯಮಾನುಸಾರ ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳು ಹಾಗೂ ಇಂಜಿನಿಯರಿಂಗ್‌ವಿಭಾಗಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮುಂದಿನ ಪ್ರಕ್ರಿಯೆಯನ್ನು ಅನುಸರಿಸಲು ಅನುವಾಗುವಂತೆ ಕೇಂದ್ರ ಪುರಸ್ಕೃತ ಜಲ ಜೀವನ್ ಮಿಷನ್ ಕಾರ್ಯಕ್ರಮದಡಿ ಸಂಯೋಜಿತಗೊಳಿಸಿದ NABARD RIDF XXVII ರಡಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಬೇಕಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಕುನೀ&ನೈಇ/280/ಗ್ರಾನೀಸ(4)/2022 ಬೆಂಗಳೂರು, ದಿನಾಂಕ:27.05.2022** 646

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ,

**(ಎ)** ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕಿನ 146 ಗ್ರಾಮೀಣ ಜನವಸತಿಗಳು, ಕಡೂರು ತಾಲ್ಲೂಕಿನ 434 ಗ್ರಾಮೀಣ ಜನವಸತಿಗಳು ಹಾಗೂ ತರೀಕೆರೆ ತಾಲ್ಲೂಕಿನ ಭಾಗಶಃ 156 ಜನವಸತಿಗಳು ಮತ್ತು ತರೀಕೆರೆ ಪಟ್ಟಣದ ಒಟ್ಟು ಅಂದಾಜು ರೂ.952.00ಕೋಟಿಗಳಲ್ಲಿ ಡಿಬಿಓಟಿ ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ

**(ಬಿ)** ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಉಳಿದ ಗ್ರಾಮೀಣ ಜನವಸತಿಗಳು ಮತ್ತು ಅಜ್ಜಂಪುರ ಪಟ್ಟಣವನ್ನು ಒಳಗೊಂಡಂತೆ ಬಹುಗ್ರಾಮ ಕುಡಿಯುವ ನೀರುಸರಬರಾಜು ಯೋಜನೆಯ ಅಂದಾಜು ಮೊತ್ತ ರೂ.154.00ಕೋಟಿಗಳಲ್ಲಿ ಡಿಬಿಓಟಿ ಆಧಾರದ ಮೇಲೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ಹಾಗೂ (ಎ) ಮತ್ತು (ಬಿ) ಯೋಜನೆಗಳ ಪರಿಣಾಮವಾಗಿ;

**(ಸಿ)** ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಹೊಸದುರ್ಗ ಪಟ್ಟಣ ಮತ್ತುಇತರೆ 346 ಗ್ರಾಮಗಳಿಗೆ ಪ್ರಗತಿಯಲ್ಲಿರುವ ನೀರು ಸರಬರಾಜು ಯೋಜನೆಯ ಅಂದಾಜು ಮೊತ್ತ ರೂ.723.93ಕೋಟಿಗಳಿಗೆ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ಹಾಗು ವ್ಯವಸ್ಥಿತ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ, ಹೊಸದುರ್ಗ ಹಂತ 1 ಭಾಗ ಎ ಯೋಜನೆಯನ್ನು ಕಾರ್ಯಗತಗೊಳಿಸುವ ಗುತ್ತಿಗೆದಾರರಿಗೆ ಚಿಕ್ಕಮಗಳೂರು ಯೋಜನೆ ಮತ್ತು ತರೀಕೆರೆ ಯೋಜನೆಯ ಸಂಯೋಜಿತ ಘಟಕಗಳನ್ನು ಕಾರ್ಯಗತಗೊಳಿಸಲು ಅನುಮೋದನೆ.

ಮೇಲಿನ ಯೋಜನಗಳ ವ್ಯಾಪ್ತಿಯಲ್ಲಿನ ಜನವಸತಿಗಳಿಗೆ ಶಾಶ್ವತ ಹಾಗೂ ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಒಟ್ಟಾರೆಯಾಗಿ ರೂ.1,829.93 ಕೋಟಿ (ಒಂದು ಸಾವಿರದ ಎಂಟುನೂರ ಇಪ್ಪತ್ತೊಂಭತು ಲಕ್ಷದ ತೊಂಭತ್ತ ಮೂರು ಸಾವಿರ ರೂಪಾಯಿಗಳು ಮಾತ್ರ) ಗಳ ಅಂದಾಜಿನಲ್ಲಿ 5 ವರ್ಷಗಳ O&M ಬಾಬ್ತು ಸೇರಿದಂತೆ ಕೇಂದ್ರ ಪುರಸ್ಕೃತ ಜೀವನ್ ಮಿಷನ್ ಕಾರ್ಯಕ್ರಮದಡಿ ಸಂಯೋಜಿತಗೊಳಿಸಿದ NABARD-RIDF XXVII ರಡಿ ಅನುಷ್ಠಾನಗೊಳಿಸಲು ಸರ್ಕಾರವು ಹರ್ಷಿಸುತ್ತದೆ.

2. ಈ ಆದೇಶವು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1.ಈ ಅನುಮೋದಿತ ಕುಡಿಯುವನೀರಿನ ಯೋಜನೆಯ ವ್ಯಾಪ್ತಿಗೆ ಬರುವ ಗ್ರಾಮ / ಜನವಸತಿಗಳು ಮತ್ತು ಯಾವುದೇ ಯೋಜನೆಗಳಡಿ ಸೇರ್ಪಡೆಯಾಗಿರಬಾರದು.

2.ಈ ಯೋಜನೆಯ DBOT ಟೆಂಡರ್‌ನ್ನು KTPP ಪಾರದರ್ಶಕ ನಿಯಮಗಳನ್ನು ಅನುಸರಿಸಿ ಅದರಂತೆ ಕ್ರಮವಹಿಸತಕ್ಕದ್ದು.

3.ಟೆಂಡರ್ ಅವಾರ್ಡ್ ಮಾಡುವ ಮೊದಲು ಅಗತ್ಯವಿರುವ ಅನುದಾನವನ್ನು ಲಭ್ಯತೆ ಮಾಡಿಕೊಂಡು ಕ್ರಿಯಾಯೋಜನೆಯಲ್ಲಿ ಅಳವಡಿಸಿದನಂತರ ನಿಯಮಾನುಸಾರ ಮುಂದಿನ ಕ್ರಮವಹಿಸುವುದು

4.ಈ ಯೋಜನೆಯ ಅನುಷ್ಠಾನ ಮತ್ತು ಅನುದಾನ ವಿನಿಯೋಗದಲ್ಲಿ ಅನುಮೋದಿತ ಟೆಂಡರ್ ಮೊತ್ತ ಮೀರಿ ಹೆಚ್ಚಳವಾಗದಂತೆ ಅನುಷ್ಠಾನ ಅಧಿಕಾರಿಗಳು ನಿಗಾವಹಿಸಿ ಪ್ರಚಲಿತ ನಿಯಮಗಳನುಸಾರ ಅಗತ್ಯವಿರುವ ನಿಬಂಧನೆಗಳನ್ನು ಅಳವಡಿಸಿಕೊಂಡು ಸೂಕ್ತ ರೀತಿಯಲ್ಲಿ ಒಡಂಬಡಿಕೆ–ಕರಾರುಗಳನ್ನು ಮಾಡಿಕೊಳ್ಳತಕ್ಕದ್ದು.

5. ಯಶಸ್ವಿ ಗುತ್ತಿಗೆದಾರರು ಕಾಮಗಾರಿಯನ್ನು ಉತ್ತಮಗುಣಮಟ್ಟದಲ್ಲಿ ಪೂರ್ಣಗೊಳಿಸಿ ಕಾರ್ಯಗತಗೊಳಿಸಬೇಕು. ತದನಂತರ 5 ವರ್ಷಗಳ ಕಾಲ ಸದರಿ ಯೋಜನೆಯ ಸಂಪೂರ್ಣ ನಿರ್ವಹಣೆ ಹಾಗೂ ಕಾರ್ಯಾಚರಣೆ ಜವಾಬ್ದಾರಿಯನ್ನು (ವಿದ್ಯುತ್ಶುಲ್ಕಹೊರತುಪಡಿಸಿ) ಸದರಿ ಸಂಸ್ಥೆ ನಿರ್ವಹಿಸತಕ್ಕದ್ದು.

6. ಯೋಜನಾ ವ್ಯಾಪ್ತಿಯ ಗ್ರಾಮೀಣ ಜನವಸತಿಗಳಿಗೆ 55 LPCD ನೀರನ್ನು ಒದಗಿಸುವುದು. ಶುದ್ಧ ಕುಡಿಯುವ ನೀರು ಪೂರೈಸಲು ಕ್ರಮವಹಿಸಬೇಕು ಮತ್ತು 85 / 135 LPCD ನೀರನ್ನು ಪಟ್ಟಣ ಪ್ರದೇಶಗಳಿಗೆ ಒದಗಿಸಲು ಅನುವಾಗುವಂತೆ ಯೋಜನೆಯನ್ನು ಅನುಷ್ಠಾನಗೊಳಿಸುವ ಷರತ್ತನ್ನು ಕರಾರಿನಲ್ಲಿ ವಿಧಿಸಬೇಕು. ಯಾವುದೇ ಕಾರಣಕ್ಕೂ ಅನುಮೋದಿತ ಯೋಜನಾ ಅಂದಾಜು ವೆಚ್ಚದಲ್ಲಿ ಹೆಚ್ಚಳವಾದಲ್ಲಿ ಯಶಸ್ವಿಗುತ್ತಿಗೆದಾರರು ಅಂತಹ ಹೆಚ್ಚಳ ಭರಿಸತಕ್ಕದ್ದು.

7. ಗುತ್ತಿಗೆದಾರರು ಸಿದ್ಧಪಡಿಸುವ ಡಿ.ಪಿ.ಆರ್‌ಗೆ ಮುಖ್ಯಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರುರವರ ಹಂತದಲ್ಲಿರುವ DBOT ತಾಂತ್ರಿಕ ಸಮಿತಿ, ತಾಂತ್ರಿಕ ಸಿಂಧುತ್ವವನ್ನು ಪರಿಶೀಲಿಸಿ ದೃಢೀಕರಿಸಬೇಕು. ಹೀಗೆ ದೃಢೀಕರಿಸುವಾಗ ವಾಸ್ತವಿಕವಾಗಿ ಅಗತ್ಯವಿರುವ ಪ್ರಮಾಣದ ಶುದ್ಧಕುಡಿಯುವ ನೀರಿನ ಪೂರೈಕೆ ವ್ಯವಸ್ಥೆಗೆ ಅಗತ್ಯವಿರುವ ಎಲ್ಲಾ ತಾಂತ್ರಿಕ ವಿನ್ಯಾಸಗಳು ಮತ್ತು ಕಾಮಗಾರಿಗಳು ಪೂರಕವಾಗಿರುವುದನ್ನು ದೃಢಪಡಿಸಿಕೊಳ್ಳಬೇಕು.

8. ಚಿಕ್ಕಮಗಳೂರು ಯೋಜನೆಯನ್ನು 30 ತಿಂಗಳಲ್ಲಿ ಮತ್ತು ತರೀಕೆರೆ ಯೋಜನೆಯನ್ನು 11 ತಿಂಗಳ ಕಾಲಮಿತಿಯೊಳಗೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು. ಯಾವುದೇ ವಿಳಂಬಕ್ಕೆ ಅವಕಾಶವೀಯ ಕೂಡದು ಯೋಜನೆಯ ಘಟಕದಲ್ಲಿನ ಸಾಮಗ್ರಿಗಳ ಬೆಲೆಹೆಚ್ಚಳಕ್ಕೆ ಅವಕಾಶವಿರುವುದಿಲ್ಲ. ಬಲ್ಕ್‌ವಾಟರ್‌ಮೀಟರ್‌ಗಳನ್ನು ಎಲ್ಲಾ ಜನವಸತಿಗಳ OHT ಬಳಿ ಅಳವಡಿಸತಕ್ಕದ್ದು.

9. ಯೋಜನಾ ಅಂದಾಜು ಮೊತ್ತದ ಕನಿಷ್ಠ 10%ನ್ನು ಯೋಜನೆ ಕಾರ್ಯಗತಗೊಳಿಸಿ ತೃಪ್ತಿಕರ O&M ವ್ಯವಸ್ಥೆ ನಿರೂಪಿಸುವ ಕಾರ್ಯಕ್ಷಮತೆ ಆಧರಿಸಿನಂತರ ಗುತ್ತಿಗೆದಾರರಿಗೆ ಪಾವತಿಸಬೇಕು.

10. ಈ ಯೋಜನೆಯ ಮುಖ್ಯಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ ನಂತರ, ಅವುಗಳ ಗುಣಮಟ್ಟ ಮತ್ತು ಕಾರ್ಯಕ್ಷಮತೆ ಮತ್ತು PMC ವರದಿ ಆಧರಿಸಿ ಅನುಮೋದಿ ToR ಹಾಗೂ ಟೆಂಡರ್ ಕರಾರಿನಂತೆ ನಿಯಮಾನುಸಾರ ಬಿಲ್ಲಾವತಿಸಲು ಅನುಷ್ಠಾನಾಧಿಕಾರಿಗಳು ಹಾಗೂ ಮುಖ್ಯಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರುರವರು ಕ್ರಮವಹಿಸಬೇಕು. ಕಾಮಗಾರಿಯ ಕಾಲಕಾಲಿಕ ಪ್ರಗತಿ ಮತ್ತುಗುಣಮಟ್ಟ ಪರಿಶೀಲಿಸಿ ಮುಖ್ಯಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ವರದಿಮಾಡತಕ್ಕದ್ದು.

11. ಈ ಯೋಜನೆಯ ವಿನ್ಯಾಸದ ಕಾರ್ಯಸಿಂಧುತ್ವ ಪರಿಶೀಲಿಸುವುದು, ಕಾಲಮಿತಿಯೊಳಗೆ ಯೋಜನೆ ಅನುಷ್ಠಾನಗೊಳಿಸುವುದು ಮತ್ತು ಯೋಜನೆಯ ಕಾಮಗಾರಿಗಳ ಗುಣಮಟ್ಟ ಪರಿವೀಕ್ಷಣೆಸಲುವಾಗಿ ಅಗತ್ಯವಿರುವ ಯೋಜನಾ ಉಸ್ತುವಾರಿಘಟಕವನ್ನು ಟೆಂಡರ್ ಮುಖೇನಗೊತ್ತುಪಡಿಸಿ, ಸರ್ಕಾರದ ಅನುಮೋದನೆ ಪಡೆಯಲು ಮುಖ್ಯಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಜರೂರಾಗಿ ಕ್ರಮವಹಿಸತಕ್ಕದ್ದು.

12. ಯೋಜನೆಯಲ್ಲಿ Bulk water meter ವ್ಯವಸ್ಥೆಯನ್ನು MVS ಯೋಜನೆಗಳಿರುವೆಡೆ ಕಡ್ಡಾಯವಾಗಿ ಮಾಡಬೇಕು. ಆಯಾ ಗ್ರಾಮಪಂಚಾಯತಿ / ಪುರಸಭೆಗೆ ಹೊರಗುತ್ತಿಗೆ ಸಂಸ್ಥೆಗೆ/ಸರ್ಕಾರಕ್ಕೆ ನೀರು ಬಳಕೆ ಆಧಾರದ ಮೇಲೆ ನೀರಿನ ಕರ ಪಾವತಿಸಬೇಕು.

13. ಸದರಿ ಯೋಜನೆಯಲ್ಲಿನ ಪಟ್ಟಣ ಪ್ರದೇಶದ O&M ವೆಚ್ಚವನ್ನು Pro-Rata ಆಧಾರದ ಮೇಲೆ ನಗರಾಭಿವೃದ್ಧಿಇಲಾಖೆ / ಸಂಬಂಧಿಸಿದ ಪುರಸಭೆ / ಪಟ್ಟಣ ಪಂಚಾಯತಿವತಿಯಿಂದ ಪಡೆಯತಕ್ಕದ್ದು.

14. ಮೇಲ್ಕಂಡ ಅನುಮೋದಿತ ಮೊತ್ತ DBOT ತಾಂತ್ರಿಕ ಸಮಿತಿ ದೃಢೀಕರಿಸುವ ಯೋಜನೆಯ ಮುಖ್ಯ ಕಾಮಗಾರಿಗಳ ವಾಸ್ತವಿಕ ಅಂದಾಜು ಮೊತ್ತದ ನಿಬಂಧನೆಗೊಳಪಟ್ಟಿರುತ್ತದೆ. ಅಂತೆಯೇ, ಅನುಮೋದಿತ ಸಂಸ್ಥೆಯೊಡನೆ MoU/ಕರಾರು ಪತ್ರ ಮಾಡಿ ಕೊಳ್ಳುವ ಮೊದಲು ಗರಿಷ್ಠ ಮಿತವ್ಯಯ ಅಳವಡಿಸಿ, ಸರ್ಕಾರದ ಅನುಮತಿಪಡೆದು ಯೋಜನೆಯ ಅನುಷ್ಠಾನ ಕುರಿತು ಮುಖ್ಯಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರು ರವರು ಮುಂದಿನ ಕ್ರಮವಹಿಸತಕ್ಕದ್ದು.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 96 ವೆಚ್ಚ-6/2022 ದಿನಾಂಕ:16.02.2022 ಜಲ ಸಂಪನ್ಮೂಲ ಇಲಾಖೆ (ತಾಂತ್ರಿಕ-1)ಯ ಟಿಪ್ಪಣಿ ಸಂ: WRD /130/ MMB /2021 ದಿನಾಂಕ:24.02.2022 ಮತ್ತು ನಗರಾಭಿವೃದ್ಧಿ ಇಲಾಖೆಯ ಟಿಪ್ಪಣಿ ಸಂ: UDD /6/ UWS/2022 ದಿನಾಂಕ:24.03.2022ರ ಸಹಮತಿಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

27/5/22

**ನಿರ್ದೇಶಕರು**
**ಹಾಗೂ ಪದನಿಮಿತ್ತ ಉಪಕಾರ್ಯದರ್ಶಿ,**
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.**

ಪ್ರತಿಗಳು:

1. ಮಹಾಲೇಖಪಾಲರು (ಲೆಕ್ಕಪತ್ರ– AG/A&E) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು(ಎಯು– I-G & SSA-AUDIT) ಕರ್ನಾಟಕ, ಬೆಂಗಳೂರು.
3. ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಮತ್ತು ಚಿತ್ರದುರ್ಗ.
4. ಸರ್ಕಾರದ ಅಪರಮುಖ್ಯಕಾರ್ಯದರ್ಶಿ, ಆರ್ಥಿಕ ಇಲಾಖೆ, ಇವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ ಬೆಂಗಳೂರು.
6. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ ಬೆಂಗಳೂರು.
7. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
9. ನಿರ್ದೇಶಕರು, ಶ್ರೀ ಅಬ್ದುಲ್ನಜೀರ್ಸಾಬ್, ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
10. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಮತ್ತು ಚಿತ್ರದುರ್ಗ.
11. ಅಧೀಕ್ಷಕ ಅಭಿಯಂತರರು ಗ್ರಾ.ಕು.ನೀ.&.ನೈ. ವೃತ್ತ ಕಛೇರಿಗಳು, ಮೈಸೂರು ಮತ್ತು ಬೆಂಗಳೂರು.
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ. ರಾಜ್ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಸಂಪಾದಕರು, "ಕರ್ನಾಟಕ ವಿಕಾಸ", ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
14. ಮುಖ್ಯಲೆಕ್ಕಾಧಿಕಾರಿ, ಗ್ರಾ.ಕು.ನೀ.&ನೈ.ಇ., ಕಾವೇರಿ ಭವನ, ಬೆಂಗಳೂರು.
15. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗಗಳು ಚಿಕ್ಕಮಗಳೂರು ಮತ್ತು ಚಿತ್ರದುರ್ಗ.
16. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿಶಾಖೆ, ಗ್ರಾ.ಅ.&.ಪಂ.ರಾಜ್ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
17. ರಾಜ್ಯಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
18. ಗ್ರಾ.ಅ.ಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
19. ಶಾಖಾರಕ್ಷಾಕಡತ / ಹೆಚ್ಚುವರಿಪ್ರತಿಗಳು.